**<u>ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ಎನ್ ಎಂ ವಕೀಲರಿಂದಃ</u>**

ವಾದಿಯು ನಮ್ಮ ವಿರುದ್ದ ನ್ಯಾಯಾಲಯದಲ್ಲಿ ಯಾವ ವಿಚಾರಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಆದರೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಚೆಕ್ಕುಬಂದಿಯನ್ನು ಅಥವಾ ಸರ್ವೆ ನಂಬರನ್ನು ನನಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ ಆದರೆ ಅನುಸೂಚಿ ಸ್ವತ್ತಿನ ಹೌಸ್ ಲೀಸ್ಟ್ ನ ನಂಬರ್ 102 ಆಗಿರುತ್ತದೆ. ಅನುಸೂಚಿ ಇನ್ನೊಂದು ಸ್ವತ್ತಿನ ನಂಬರ್ , ವಿಸ್ತೀರ್ಣ ಹಾಗೂ ಚೆಕ್ಕು ಬಂದಿ ಹೇಳಲು ಸಾಧ್ಯವಿಲ್ಲ. ದಾವೆಯನ್ನು ಹಾಕಿದ ನಂತರ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಸ್ವತ್ತಿನ ದಾಖಲಾತಿಗಳು ಯಾರ ಹೆಸರಿನಲ್ಲಿ ಇರುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ನಾನು ಪರಿಶೀಲಿಸಿರುತ್ತೇನೆ. ಅದು ಯೋಗೀಶ್ ಎಂಬ ಹೆಸರಿನಲ್ಲಿರುತ್ತದೆ. ಯೋಗೀಶ್ ಎಂಬುವವನು ವಾದಿಯ ಮಗನಾಗಿರುತ್ತಾನೆ. ಅನುಸೂಚಿ ಸ್ವತ್ತಿನ ಅಸಸ್ ಮೆಂಟ್ ನಂಬರ್ 102 ಇದು ಯೋಗೀಶ್ ರವರ ಹೆಸರಿನಲ್ಲಿ ಇರುತ್ತದೆ.

2. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಪ್ರತಿವಾದ ಪತ್ರದಲ್ಲಿರುವಂತಹ ಸ್ವತ್ತು ನನ್ನ ತಂದೆಗೆ ಸೇರಿದ ಸ್ವತ್ತಾಗಿದ್ದು, ಅದು ಅವರಿಗೆ ಅವರ ತಾತನಾದ ಹನುಮಂತಪ್ಪ ಇವರಿಂದ ಬಂದಿರುತ್ತದೆ. ಹನುಮಂತಪ್ಪ ನವರಿಗೆ ಸದರಿ ಸ್ವತ್ತು ವಿಭಾಗದ ಮೂಲಕ ಬಂದಿರುತ್ತದೆ. ಹನುಮಂತಪ್ಪ ಒಟ್ಟು ಇಬ್ಬರು ಸಹೋದರರಾಗಿರುತ್ತಾರೆ ಅದರಲ್ಲಿ ಅವರ ಅಣ್ಣನ ಹೆಸರು ದೊಡ್ಡ ರಂಗಪಪ್ಪ ಅವರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ನನ್ನ ತಂದೆಗೆ ನನ್ನ ತಾತನಿಂದ ಅನುವಂಶಿಯವಾಗಿ ಬಂದಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ ಆದರೆ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಪ್ರತಿವಾದ ಪತ್ರದಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ನನಗಿಂತ ಹೆಚ್ಚಾಗಿ ನನ್ನ ತಂದೆಗೆ ಮಾಹಿತಿ ಇರುತ್ತ ದೆ ಎಂದರೆ ಸರಿ .

3.ನಮ್ಮ ತಂದೆಗೆ ಒಬ್ಬಳು ಸಹೋದರಿ ಇರುತ್ತಾಳೆ . ದಾವಾ ಸ್ವತ್ತಾಗಲಿ , ಪ್ರತಿವಾದ ಪತ್ರದಲ್ಲಿರುವ ಸ್ವತ್ತಾಗಲೀ ಎಸ್ ನೇರಲಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ . ಪ್ರತಿವಾದ ಪತ್ರದಲ್ಲಿರುವ ಸ್ವತ್ತು ನಿಡಿಃ 1 ಇದು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ನಿಡಿ 15 ಮನೆ ಕಟ್ಟಲು ಪರವಾನಿಗೆ ಇದನ್ನು ನಾನು ಶ್ರೀರಾಂಪುರ ಗ್ರಾಮ ಪಂಚಾಯಿತಿಯಿಂದ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲು ಸದರಿ ಸ್ವತ್ತು ಶ್ರೀರಾಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುತ್ತದೆ. ಆದರೆ ಈಗ ಎಸ್. ನೇರಲಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಯಾವ ಸಾಲಿನಲ್ಲಿ ಈ ರೀತಿಯಾಗಿ ವಿಭಾಗವಾಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

4. ವಾದಿಯು ವಾಸಮಾಡುತ್ತಿರುವಂತ ಮನೆಯು ಪಶ್ಚಿಮಾಭಿಮುಖವಾಗಿರುತ್ತದೆ ಎಂದರೆ ಸರಿ. ವಾದಿಯು ಹಾಕಿರುವಂತಹ ದಾವೆಯಲ್ಲಿ ಸದರಿ ಮನೆಯು ಎರಡನೇ ಸ್ವತ್ತು ಆಗಿರುತ್ತದೆ ಎಂದರೆ ನನಗೆ ಆ ವಿಚಾರ ತಿಳಿದಿರುವುದಿಲ್ಲ. ವಾದಿಯ ಮನೆಯ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ದಾವಾ 1 ರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ರಸ್ತೆ ಇರುತ್ತದೆ. ಉತ್ತರ ದಿಕ್ಕಿಗೆ ದಾಸಾಜ್ಜನ ಮನೆ ಇರುತ್ತದೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿರುವಂತಹ ಸ್ವತ್ತು ದಾಸಜ್ಜನ ಮನೆಯ ಪಶ್ಚಿಮಕ್ಕೆ ಬರುತ್ತದೆ.

5. 2 ನೇ ದಾವಾ ಸ್ವತ್ತು ಪಶ್ಚಿಮಕ್ಕೆ ರಸ್ತೆ ಬರತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದ ಪತ್ರದ ಸ್ವತ್ತು ಕದರಜ್ಜನ ದಾಸಪ್ಪನ ಮನೆಯ ಪಶ್ಚಿಮಕ್ಕೆ ಬರುತ್ತದೆ. ನಮ್ಮ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ ಯಾಗಿರುತ್ತದೆ. ಈಗ ಅದರಲ್ಲಿ ಜಯಮ್ಮ ಅನಧೀಕೃತವಾಗಿ ಮನೆ ಕಟ್ಟಿರುತ್ತಾರೆ. ಜಯಮ್ಮನ ಗಂಡ ರಾಜಣ್ಣ ನನ್ನ ತಾಯಿಯ ಅಣ್ಣ ಎಂದರೆ ಸರಿ . ನಮ್ಮ ಊರಿನಲ್ಲಿ ಗ್ರಾಮ ಪಂಚಾಯಿತ ಸದಸ್ಯರಾಗಿದ್ದರು ಎಂದರೆ ಸರಿ. ಅ ಕಾರಣಕ್ಕಾಗಿ ಅವರು

ರಸ್ತೆಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. ನಾವು ಅವರೊಂದಿಗೆ ಉತ್ತಮ ಸಂಬಂಧವಿಲ್ಲ.

6. ವಾದಿಯ ವಾಸದ ಮನೆ ಪೂರ್ವ ಪಶ್ಚಿಮ 35 ಅಡಿಗಳು ಉತ್ತರ ದಕ್ಷಿಣ 15 ಅಡಿ ಎಂದರೆ ನನಗೆ ಗೊತ್ತಿಲ್ಲ. ಕದರಪ್ಪ ದಾಸಜ್ಜನವರ ಮನೆಯ ಒಟ್ಟು ವಿಸ್ತೀರ್ಣ ನನಗೆ ಹೇಳಲು ಸಾಧ್ಯವಿಲ್ಲ ವಾದಿಯ ಮನೆಯ ಪಶ್ಚಿಮದಲ್ಲಿರುವಂತಹ ಖಾಲಿ ಜಾಗಕ್ಕೂ ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಯ ಮನೆಯ ನಂತರ ಖಾಲಿ ನಿವೇಶನ ಬಂದಿದ್ದು, ಅದರ ನಂತರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣವಾಗಿ ರಸ್ತೆಯೇ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಡಿಃ11 ಮತ್ತು 12 ಎರಡು ಮನೆಗಳು ಭೂತಯ್ಯನ ಮನೆಯಾಗಿರುತ್ತದೆ. ಭೂತಯ್ಯನವರು ನಮ್ಮ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತಾರೆ. ನಾನು ಹಾಜರುಪಡಿಸಿರುವಂತಹ ನಿಡಿಃ 11 ಮತ್ತು 12 ರಲ್ಲಿ ಭೂತಯ್ಯನ ಮನೆ ಇರುವಂತೆ ನಾನು ಹಾಜರುಪಡಿಸಿರುವಂತಹ ನಿಡಿಃ 1 ಇದರಲ್ಲಿ ನಮೂದಾಗಿರುವುದಿಲ್ಲ. ನಾನು ಮನೆಯನ್ನು ಕಟ್ಟಲು ಪಡೆದುಕೊಂಡಿರುವ ಪರವಾನಿಗೆಯನ್ನು ಸಹ ಭೂತಯ್ಯನ ಮನೆ ಇರುಬ ಬಗ್ಗೆ ನಮೂದಾಗಿರುವುದಿಲ್ಲ.

7. ನನ್ನ ತಂದೆ ನಿಡಿಃ15 ರಂತೆ ಪರವಾನಿಗೆ ಪಡೆದುಕೊಂಡಿದ್ದರು ಸಹ ಹಣಕಾಸಿನ ಸಮಸ್ಯೆಯಿಂದ ಮನೆಯನ್ನು ಕಟ್ಟಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ನಾನು ಸದರಿ ವಿಷಯವನ್ನು ನಮೂದು ಮಾಡಿರುವುದಿಲ್ಲ. ನಾನು ಹಾಜರುಪಡಿಸಿರುವಂತಹ ಕಂದಾಯ ರಶೀದಿಗಳು ಖಾತಾ ಸಂಖ್ಯೆ 95 ಕ್ಕೆ ಸಂಬಂಧಪಟ್ಟಂತೆ ಕಟ್ಟಿರುತ್ತೇವೆ ಎಂದರೆ ಸರಿ . ಅದು ಈಗ ಹೊಸ ನಂಬರ್ ಆಗಿರುತ್ತದೆ. ನಿಡಿಃ1 ರಲ್ಲಿ ಖಾತಾ ಸಂಖೆ 63 ಎಂದು ಇರುತ್ತದೆ ಎಂದರೆ ಸರಿ . ನನಗೆ ಪ್ರತಿವಾದ ಪತ್ರದ ಸ್ವತ್ತನ್ನು ಹೊರತುಪಡಿಸಿ

**ಓ ಎಸ್ ನಂಃ 442/2018**
**ಡಿ.ಡಬ್ಲ್ಯೂ -1**
**ದಿನಾಂಕಃ 02-07-2024**

ಬೇರೆ ವಾಸದ ಮನೆ ಇರುತ್ತದೆ ಎಂದರೆ ಸರಿ. ಆ ಮನೆಯ ಖಾತಾ ಸಂಖ್ಯೆ 95 ಆಗಿರುತ್ತದೆ ಎಂದರೆ ಸರಿಯಲ್ಲ. ಅದನ್ನು ನಿಖರವಾಗಿ ಹೇಳಲು ಈಗ ಸಾಧ್ಯವಾಗುತ್ತಿಲ್ಲ

9. ನನ ತಾತನಿಂದ ನನ್ನ ತಂದೆಗೆ ಪ್ರತಿವಾದ ಪತ್ರದ ಸ್ವತ್ತು ಯಾವಾಗ ಬದಲಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಶ್ರೀರಾಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವಾಗಲೇ ಸ್ವತ್ತು ಬದಲಾವಣೆಯಾಗಿರುತ್ತದೆ. ನಾನು ಹಾಜರುಪಡಿಸಿರುವಂತಹ ನಿಡಿಃ 1 ರಲ್ಲಿ ಪೌತಿ ಆಧಾರದ ಮೇಲೆ ನಮೂದಾಗಿಲ್ಲ ಎಂದರೆ ಸರಿ . ನಿಡಿಃ11 ಮತ್ತು 12 ನ್ನು ನಾನೇ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ನಾನು ಸದರಿ ಪೋಟೋ ತೆಗೆದ ಮೊಬೈಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನಿಡಿಃ 16 ನ್ನು ಯಾವ ದಿನಾಂಕ ಮತ್ತು ಯಾವ ಅಂಗಡಿಯಲ್ಲಿ ತೆಗೆದುಕೊಂಡಿರುತ್ತೇನೆ ಎಂದು ಈಗ ಹೇಳಲು ಸಾಧ್ಯವಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವಂತಹ ದಾಖಲಾತಿಗಳು ನಕಲಾಗಿದ್ದು, ಅದನ್ನು ವಾದಿಗೆ ತೊಂದರೆಕೊಡುವ ಉದ್ದೇಶದಿಂದ ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.